**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

<u>ಸತ್ರ ಮೊಕದ್ದಮೆ ನಂಃ **95/2024**</u>

| | | |
|---|---|---|
| ಸಾಕ್ಷಿದಾರರ ಹೆಸರು | - ರೇಣುಕಪ್ರಸಾದ | ಪಿಡಬ್ಲೂ - 15 |
| ತಂದೆಯ ಹೆಸರು | - ಶಿವಪ್ಪ | ಸಿಡಬ್ಲೂ - 33 |
| ವಯಸ್ಸು | - 42 ವರ್ಷ | |
| ಉದ್ಯೋಗ | - ಪೊಲೀಸ್ ನಿರೀಕ್ಷಕರು, ಪೊಲೀಸ್ ತರಬೇತಿ ಶಾಲೆ, ಚನ್ನಪಟ್ಟಣ | |
| ವಾಸ ಸ್ಥಳ | - ಚನ್ನಪಟ್ಟಣ | |

(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 29-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ದಿಃ 03-11-2023 ರಿಂದ 26-11-2024 ರವರೆಗೆ ನಾನು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಆರಕ್ಷಕ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 22-05-2024 ರಂದು ಈ ಪ್ರಕರಣದ ಕಡತವನ್ನು ಪ್ರಾಸಾ.13 ರವರಿಂದ ಪಡೆದು ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿರುತ್ತೇನೆ.

3. ದಿಃ 22-06-2024 ರಂದು ಚಿಕ್ಕಮಗಳೂರಿನ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ ಪ್ರಾಸಾ.1, 2 ಮತ್ತು ಚಾಸಾ.10 ರವರ ಹೇಳಿಕೆಗಳನ್ನು ಸಿ.ಆರ್.ಪಿ.ಸಿ. ಕಲಂ 164 ರಡಿಯಲ್ಲಿ ದಾಖಲಿಸಿಕೊಡುವಂತೆ ಕೋರಿದ್ದೆನು.

4. ದಿಃ 06-07-2024 ರಂದು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಿಂದ ಮೃತ ಕನಕರವರ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದುಕೊಂಡಿದ್ದೇನೆ. ಸಾಕ್ಷಿಯು ಸದರಿ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.19 ಎಂದು ಗುರುತಿಸಲಾಗಿದ್ದು ಅವುಗಳಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಗಳನ್ನು ನಿಪಿ.19(ಬಿ) ರಿಂದ ಪಿ.19(ಡಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.15 ರವರಿಂದ ಕೃತ್ಯ ನಡೆದ ಸ್ಥಳದ ಬಗ್ಗೆ ವರದಿಯನ್ನು ಪಡೆದುಕೊಂಡಿದ್ದೇನೆ. ಸಾಕ್ಷಿಯು ಸದರಿ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.14 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು.

5. ಅದೇ ದಿನ ಕೃತ್ಯ ನಡೆದ ಸ್ಥಳ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಪ್ರಾಸಾ.14 ರವರಿಂದ ವರದಿಯನ್ನು ಪಡೆದುಕೊಂಡಿದ್ದೇನೆ. ಸಾಕ್ಷಿಯು ಸದರಿ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.36 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.36(ಬಿ) ಎಂದು ಗುರುತಿಸಲಾಯಿತು.

6. ಅದೇ ದಿನ ಪ್ರಾಸಾ.6 ರವರು ತಯಾರಿಸಿಕೊಟ್ಟ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಪತ್ರದೊಂದಿಗೆ ಪಡೆದುಕೊಂಡಿದ್ದೇನೆ. ಸಾಕ್ಷಿಯು ಸದರಿ ನಕ್ಷೆ ಮತ್ತು ಪತ್ರವನ್ನು ಮತ್ತು ಅವುಗಳಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ.16 ಮತ್ತು ಪಿ.17 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.16(ಬಿ) ಮತ್ತು ಪಿ.17(ಎ) ಎಂದು ಗುರುತಿಸಲಾಯಿತು.

7. ಅದೇ ದಿನ ಚಿಕ್ಕಮಗಳೂರು ನ್ಯಾಯಾಧೀಶರು ಸಿ.ಆರ್.ಪಿ.ಸಿ. ಕಲಂ 164 ರಡಿಯಲ್ಲಿ ದಾಖಲಿಸಿದ್ದ ಪ್ರಾಸಾ.1, 2 ಮತ್ತು ಚಾಸಾ.10 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸದರಿ ಹೇಳಿಕೆಗಳನ್ನು ಕ್ರಮವಾಗಿ ನಿಪಿ.38 ರಿಂದ ಪಿ.40 ಎಂದು ಗುರುತಿಸಲಾಯಿತು.

8. ತನಿಖೆಯಲ್ಲಿ ಆರೋಪಿಯ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ಎಫ್.ಎಸ್.ಎಲ್. ವರದಿ ಮತ್ತು ಆಯುಧವನ್ನು ವೈದ್ಯರಿಂದ ಪರಿಶೀಲಿಸಿ ಅವರ ಅಭಿಪ್ರಾಯ ವರದಿಯನ್ನು ಬಾಕಿ ಇರಿಸಿ ಅದೇ ದಿನ ಅಂದರೆ ದಿಃ 06-07-2024 ರಂದು ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

9. ನಂತರ ದಿಃ 08-07-2024 ರಂದು ಮಂಗಳೂರಿನ ಆರ್.ಎಫ್.ಎಸ್.ಎಲ್. ನಿಂದ ಫ್ರಾಸಾ.9 ರವರು ನೀಡಿದ ವರದಿಯನ್ನು ಪಡೆದುಕೊಂಡಿದ್ದೇನೆ. ಸಾಕ್ಷಿಯು ಸದರಿ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸ್ವೀಕೃತಿ ಸಹಿಗಳನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.22 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಗಳನ್ನು ನಿಪಿ.22(ಎ) ಮತ್ತು ಪಿ.22(ಬಿ) ಎಂದು ಗುರುತಿಸಲಾಯಿತು.

10. ಅದೇ ದಿನ ಫ್ರಾಸಾ.11 ಮತ್ತು 12 ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ಅಡಿಯಲ್ಲಿ ದೃಢೀಕರಣ ಪತ್ರಗಳನ್ನು ಪಡೆದುಕೊಂಡಿದ್ದೇನೆ. ಸಾಕ್ಷಿಯು ಸದರಿ ದೃಢೀಕರಣ ಪತ್ರಗಳನ್ನು ಮತ್ತು ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.24 ಮತ್ತು ಪಿ.25 ಎಂದು ಗುರುತಿಸಲಾಗಿದ್ದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.24(ಸಿ) ಮತ್ತು ಪಿ.25(ಬಿ) ಎಂದು ಗುರುತಿಸಲಾಯಿತು.

11. ದಿಃ 22-07-2024 ರಂದು ಚಾಸಾ.11 ರವರ ಹೇಳಿಕೆ, ಫ್ರಾಸಾ.2 ಮತ್ತು ಚಾಸಾ.10 ರವರ ಮುಂದುವರೆದ ಹೇಳಿಕೆಗಳನ್ನು ಪಡೆದಿದ್ದೆನು.

12. ದಿಃ 25-07-2024 ರಂದು ಚಾಸಾ.20 ಮತ್ತು 21 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು. ನಂತರ ಮೇಲೆ ಹೇಳಿದಂತೆ ಪಡೆದುಕೊಂಡ ವರದಿ ಮತ್ತು ಹೇಳಿಕೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿದ್ದೇನೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿಃ **LADCS** ನ **Deputy Chief Defense counsel** ಆದ ಶ್ರೀ ಎನ್.ಡಿ ವಕೀಲರಿಂದಃ</u>

(ಈ ಹಂತದಲ್ಲಿ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ ಕೇಳಿಸುತ್ತಿದೆಯೇ ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

13. ಫ್ರಾಸಾ.14 ರವರಿಂದ ನಿಪಿ.36 ರಂತೆ ವರದಿಯನ್ನು ಪಡೆದುಕೊಂಡಿದ್ದಾಗಿ ಹೇಳಿದ್ದೀರಿ ಆ ಸಮಯಕ್ಕೆ ಅವರಿಂದ ಲಾಗ್ ಪುಸ್ತಕದ ಪ್ರತಿಯನ್ನು ಪಡೆಯಲು ತೊಂದರೆ ಇತ್ತೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ವರದಿಯನ್ನು ಅದು ತಯಾರಾಗಿದೆ ಎಂದು ಹೇಳಿದ ದಿನದಿಂದ 2 ತಿಂಗಳ ನಂತರ ಪಡೆದುಕೊಂಡಿದ್ದೀರಿ ಅದಕ್ಕೆ ಕಾರಣವೇನು ಎಂದರೆ ಸಾಕ್ಷಿ

ಅನಾರೋಗ್ಯದ ನಿಮಿತ್ತ ನಾನು ರಜೆಯಲ್ಲಿದ್ದೆನು, ಹಾಗಾಗಿ ಅದನ್ನು ತಡವಾಗಿ ಸ್ವೀಕರಿಸಿದ್ದೇನೆ ಎನ್ನುತ್ತಾರೆ. ಅದನ್ನು ಸ್ವೀಕರಿಸಲು ತಡವಾದ ಕಾರಣವನ್ನು ಕೇಸ್ ಡೈರಿಯಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಕೃತ್ಯ ನಡೆದಿದೆ ಎನ್ನಲಾದ ಸ್ಥಳ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ಇರಲಿಲ್ಲ ಹಾಗಾಗಿ ಸಂಬಂದಪಟ್ಟ ಲಾಗ್ ಪುಸ್ತಕವನ್ನು ಪಡೆದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

14. ಫ್ರಾಸಾ.6 ರವರಿಂದ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ಪಡೆದುಕೊಂಡಿದ್ದಾಗಿ ಹೇಳಿದ್ದೀರಿ ಅವರಿಂದ ಕಚ್ಚಾ ನಕ್ಷೆಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಅವರು ನೀಡಿದ ನಕ್ಷೆಯನ್ನು ಪಡೆದುಕೊಂಡಿದ್ದೇನೆ ಎನ್ನುತ್ತಾರೆ. ನಿಮ್ಮ ಪ್ರಭಾವವನ್ನು ಬೀರಿ ಫ್ರಾಸಾ.6 ರವರಿಂದ ನಿಪಿ.16 ರಂತೆ ಸುಳ್ಳು ನಕ್ಷೆಯನ್ನು ತಯಾರಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

15. ಫ್ರಾಸಾ.1, ಫ್ರಾಸಾ.2 ಮತ್ತು ಚಾಸಾ.10 ರವರ ಹೇಳಿಕೆಗಳನ್ನು ಸಿ.ಆರ್.ಪಿ.ಸಿ ಕಲಂ 164 ರಡಿಯಲ್ಲಿ ದಾಖಲಿಸಲು ವಿಳಂಬವಾಗಿದ್ದು ಅದಕ್ಕೆ ಕಾರಣವನ್ನು ನೀವು ಕೇಸ್ ಡೈರಿಯಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

16. ಫ್ರಾಸಾ.2 ಮತ್ತು ಚಾಸಾ.10 ರವರು ಸಿ.ಆರ್.ಪಿ.ಸಿ ಕಲಂ 164 ರಡಿಯಲ್ಲಿ ನೀಡಿದ ಹೇಳಿಕೆಗಳಲ್ಲಿ ಆರೋಪಿಯನ್ನು ಪೊಲೀಸರ ವಶಕ್ಕೆ ನೀಡಲಾಗಿದೆ ಎಂದು ತಿಳಿಸಿದ್ದು ಅದನ್ನು

ಸರಿಪಡಿಸಲು ನೀವು ಅವರ ಮುಂದುವರೆದ ಹೇಳಿಕೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸರಿಯಲ್ಲ. ಆರೋಪಿ ಪೊಲೀಸರ ವಶದಲ್ಲಿದ್ದು ಅದು ಅಕ್ರಮ ಬಂಧನವಾಗುತ್ತದೆ ಎಂದು ಅವರ ಹೇಳಿಕೆಗಳಿಂದ ಗೊತ್ತಾದ ಮೇಲೆ ಅದನ್ನು ಸರಿಪಡಿಸಲು ಅವರ ಮುಂದುವರೆದ ಹೇಳಿಕೆಗಳನ್ನು ನೀವೇ ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

17. ಚಾಸಾ.20 ಮತ್ತು 21 ರವರ ಹೇಳಿಕೆಗಳನ್ನು ದಿಃ 25-07-2024 ರಂದು ಪಡೆದುಕೊಂಡಿದ್ದಾಗಿ ಹೇಳಿದ್ದೀರಿ ಅದರ ಪೂರ್ವದಲ್ಲಿ ಅವರ ಹೇಳಿಕೆಗಳನ್ನು ದಾಖಲಿಸಲು ತೊಂದರೆ ಇತ್ತೆ ಎಂದರೆ ಸಾಕ್ಷಿ ನಾನು ಬೇರೆ ಪ್ರಕರಣದ ತನಿಖೆಯಲ್ಲಿ ನಿರತನಾಗಿದ್ದೆನು ಎನ್ನುತ್ತಾರೆ. ಫ್ರಾಸಾ.2, ಚಾಸಾ.10 ಮತ್ತು ಚಾಸಾ.11 ರವರು ನೀವು ಹೇಳಿದಂತೆ ಯಾವುದೇ ಮುಂದುವರೆದ ಹೇಳಿಕೆಗಳನ್ನು ನೀಡದಿದ್ದರೂ ಸಹ ನೀವೇ ಅವುಗಳನ್ನು ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

18. ಮೃತಳಿಗೆ ಮದ್ಯಪಾನ ಮಾಡುವ ಅಭ್ಯಾಸವಿದ್ದು ಅದರಂತೆ ಆಕೆ ಮದ್ಯವನ್ನು ಸೇವಿಸಿ ಕಲ್ಲಿನ ಮೇಲೆ ಬಿದ್ದು ಗಾಯಗೊಂಡು ಮೃತಪಟ್ಟಿರುವುದು ನಿಮ್ಮ ತನಿಖೆಯಲ್ಲಿ ಕಂಡುಬಂದಿತ್ತು ಎಂದರೆ ಸರಿಯಲ್ಲ.

19. ದಿಃ 22-06-2024 ರಂದು ಚಿಕ್ಕಮಗಳೂರಿನ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ ಫ್ರಾಸಾ.1, 2 ಮತ್ತು ಚಾಸಾ.10 ರವರ ಹೇಳಿಕೆಗಳನ್ನು ಸಿ.ಆರ್.ಪಿ.ಸಿ. ಕಲಂ

164 ರಡಿಯಲ್ಲಿ ದಾಖಲಿಸಿಕೊಡುವಂತೆ ಕೋರಿದ್ದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

20. ದಿಃ 06-07-2024 ರಂದು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಿಂದ ಮೃತ ಕನಕರವರ ನಿಪಿ.19 ರಂತೆ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದುಕೊಂಡಿದ್ದೇನೆ, ಅದೇ ದಿನ ಚಾಸಾ.15 ರವರಿಂದ ಕೃತ್ಯ ನಡೆದ ಸ್ಥಳದ ಬಗ್ಗೆ ನಿಪಿ.14 ರಂತೆ ವರದಿಯನ್ನು ಪಡೆದುಕೊಂಡಿದ್ದೇನೆ, ಅದೇ ದಿನ ಕೃತ್ಯ ನಡೆದ ಸ್ಥಳ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಫ್ರಾಸಾ.14 ರವರಿಂದ ನಿಪಿ.36 ರಂತೆ ವರದಿಯನ್ನು ಪಡೆದುಕೊಂಡಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

21. ಅದೇ ದಿನ ಫ್ರಾಸಾ.6 ರವರು ತಯಾರಿಸಿಕೊಟ್ಟ ನಿಪಿ.16 ರಂತೆ ನಕ್ಷೆಯನ್ನು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ನಿಪಿ.17 ಪತ್ರದೊಂದಿಗೆ ಪಡೆದುಕೊಂಡಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

22. ಅದೇ ದಿನ ಚಿಕ್ಕಮಗಳೂರು ನ್ಯಾಯಾಧೀಶರು ಸಿ.ಆರ್.ಪಿ.ಸಿ. ಕಲಂ 164 ರಡಿಯಲ್ಲಿ ದಾಖಲಿಸಿದ್ದ ಫ್ರಾಸಾ.1, 2 ಮತ್ತು ಚಾಸಾ.10 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

23. ನಂತರ ದಿಃ 08-07-2024 ರಂದು ಮಂಗಳೂರಿನ ಆರ್.ಎಫ್.ಎಸ್.ಎಲ್. ನಿಂದ ಪ್ರಾಸಾ.9 ರವರು ನೀಡಿದ ನಿಪಿ.22 ರಂತೆ ವರದಿಯನ್ನು ಪಡೆದುಕೊಂಡಿದ್ದೇನೆ, ಅದೇ ದಿನ ಪ್ರಾಸಾ.11 ಮತ್ತು ಪ್ರಾಸಾ.12 ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ಅಡಿಯಲ್ಲಿ ನಿಪಿ.24 ಮತ್ತು ಪಿ.25 ರಂತೆ ದೃಢೀಕರಣ ಪತ್ರಗಳನ್ನು ಪಡೆದುಕೊಂಡಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

24. ದಿಃ 22-07-2024 ರಂದು ಚಾಸಾ.11 ರವರ ಹೇಳಿಕೆ, ಪ್ರಾಸಾ.2 ಮತ್ತು ಚಾಸಾ.10 ರವರ ಮುಂದುವರೆದ ಹೇಳಿಕೆಗಳನ್ನು ಪಡೆದಿದ್ದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿಃ 25-07-2024 ರಂದು ಚಾಸಾ.20 ಮತ್ತು 21 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

25. ಚಿಕ್ಕಮಗಳೂರಿನ ಹಿರಿಯ ಸಿವಿಲ್ ಮತ್ತು ಸಿಜೆಎಂ ನ್ಯಾಯಾಧೀಶರವರು ಕ್ರಿಮಿನಲ್ ಮಿಸ್ 307/2023 ರಲ್ಲಿ ಮಾಡಿದ್ದ ಆದೇಶದ ಮೇರೆಗೆ ಆರೋಪಿಯನ್ನು ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸುವಂತೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣಾಧಿಕಾರಿಗೆ ಸೂಚಿಸಲಾಗಿತ್ತು ಮತ್ತು ಮಾನಸಿಕ ಆರೋಗ್ಯ ಕಾಯ್ದೆ ಅಡಿಯಲ್ಲಿ ಆತ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಗಳು ಸದರಿ ಠಾಣೆಯಲ್ಲಿ ಇದ್ದವು ಎಂದರೆ ನನಗೆ ನೆನಪಿಲ್ಲ.

26. ಆರೋಪಿ ಭೈಪ್ರೋಲರ್ ಡಿಸ್ ಅರ್ಡರ್ ನಿಂದ ಬಳಲುತ್ತಿದ್ದರೂ ಸಹ ನೀವು ಆತನಿಗೆ ಚಿಕಿತ್ಸೆ ಕೊಡಿಸದೇ ನೀವು ಕರ್ತವ್ಯ ಲೋಪವೆಸಗಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತನಿಖೆಯಲ್ಲಿ ಆರೋಪಿಯ ವಿರುದ್ಧ ಯಾವುದೇ ಆರೋಪ ಸಾಬೀತಾಗದಿದ್ದರು ಸಹ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ